ತಾಲ್ಲೂಕಿನಲ್ಲಿ ಆಗಿದೆ, ಅವರ ಕ್ಷೇತ್ರದಲ್ಲಿ ಆಗಿದೆ ಎಂದು. ಆದರೆ ನಾವು ಯಾವ ಘಟಕಕ್ಕೆ ಕೊಟ್ಟಿದ್ದೇವೆ ಎಂಬ ವಿವರವನ್ನು ಕೊಡಲಿ, ನಾನು ಅವರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ. ನಾನು ಬಂದ ಮೇಲೆ ಇದನ್ನೊಲ್ಲೂ ಕಂಪ್ಯೂಟರೈಸ್ ಮಾಡಿದ್ದೇನೆ. ಯಾರ್ಯಾರು ಪ್ರಭಾವ ಭೀರಿ ಸಬ್ಸಿಡಿ ತೆಗೆದುಕೊಳ್ಳುತ್ತಿದ್ದರೋ ಅದನ್ನೆಲ್ಲೂ ನಿಲ್ಲಿಸಿದ್ದೇನೆ. ಆದರೆ ಯಾವುದಾದರೂ ಒಂದು ರೋಗಗ್ರಸ್ತ ವಾಗುತ್ತದೆಂದು ನಮ್ಮ ಗಮನಕ್ಕೆ ಬಂದಾಗ ಆಂತಹದ್ದನ್ನು ಬದುಕಿಸುವುದಕ್ಕಾಗಿ ಕೆಲವೊಂದು ಸಂದರ್ಭದಲ್ಲಿ ಎಕ್ಸ್‌ಘ್‌ಷನಲ್ ಕೇಸಾಗಿ ಕೊಟ್ಟಿರಬಹುದು. ಅದರಲ್ಲೂ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತಹದ್ದಕ್ಕೆ, ಅಂದರೆ, ಈ ಕೋಲ್ಡ್ ಸ್ಟೋರೇಜ್ ಇಂತಹದ್ದಕ್ಕೆಲ್ಲಾ ಕೊಡತಕ್ಕಂತಹ ಅವಶ್ಯಕತೆ ಇದೆ. ಈ ಕೋಲಾರ ಜಿಲ್ಲೆಯಲ್ಲಿ ಟೊಮೋಟವನ್ನು ಬೀದಿಗೆಸೆಯುತ್ತಾರೆ, ಆಲೂಗಡ್ಡೆಯನ್ನು ಬೀದಿಗೆಸೆಯುತ್ತಾರೆ, ಅಂತಹ ಕಡೆ ಇವತ್ತಿಗೂ ಕೂಡ, ಔಟ್‌ಆಫ್ ದ ವೇ ಅಂತಹ ಕಡೆ ಕೋಲ್ಡ್ ಸ್ಟೋರೇಜ್ ಬರುವುದಾದರೆ ಖಂಡಿತವಾಗಿ ಅವರಿಗೂ ಸಹ ನಾವು ರೈತರ ಹಿತದೃಷ್ಟಿಯಿಂದ ಏನು ಕೊಟ್ಟಿದೆ, ಅದನ್ನು ಸಹ ನಾನು ವಿಚಾರಣೆ ಮಾಡಿಸುತ್ತೇನೆ, ಅದು ಒಂದು ಔಟ್ ಆಫ್ ದ ವೇ ಆದರೆ, ಮೌಖಿಕವಾಗಿ ತಾವು ತಿಳಿಸಿದ್ದೀರಿ, ಖಂಡಿತವಾಗಿ ನಾನು ಅದರ ಬಗ್ಗೆ ವಿಚಾರಣೆ ಮಾಡಿಸಿ, ತಮ್ಮ ಸಮಸ್ಯೆಯನ್ನು ಬಗೆಹರಿಸುತ್ತೇನೆ.

ಶ್ರೀ ವಸಂತ ಸಾಲಿಯಾನ: ಗ್ರಾಮೀಣ ಪ್ರದೇಶಗಳಲ್ಲಿ ಸೇಲ್ಸ್‌ಟ್ಯಾಕ್ಸ್‌ಗೆ 5 ವರ್ಷ ವಿನಾಯಿತಿ ಇದೆ. ಸೇಲ್ಸ್‌ಟ್ಯಾಕ್ಸ್‌ನಲ್ಲಿ ಹೇಗೆ ಕಟ್ ಮಾಡುತ್ತೀರಿ?

ಶ್ರೀ ಬಿ ಎ ಮೊಯಿದ್ದೀನ್: ನಾವು ಪಟ್ಟಿ ಮಾಡಿಸಿದ್ದೇವೆ. ಮಾರಾಟ ತೆರಿಗೆ ಕೊಡುವ ಅರ್ಹತೆ ಪಡೆದಿರುವ ಕೈಗಾರಿಕೆಗಳ ಸಂಖ್ಯೆ 10; ಅದಕ್ಕೇ ನಾನು ಹೇಳುತ್ತಿದ್ದೇನೆ, ಅವಕ್ಕೆ ನೂರರಷ್ಟು ವಿನಾಯಿತಿ ಇದೆ. ಅದನ್ನೇ 125 ಪರ್ಸೆಂಟ್ ಮಾಡಿಬಿಡುತ್ತೇವೆ ನಾವು.

ಶ್ರೀ ಯು ಆರ್ ಸಭಾಪತಿ: ನನ್ನ ಮೂಲಭೂತ ಪ್ರಶ್ನೆಗೆ ಅವರು ಉತ್ತರ ಕೊಟ್ಟಿಲ್ಲ. ಸರ್ಕಾರದ ನಿಯಮಾವಳಿ ಪ್ರಕಾರ ವಿದ್ಯಾವಂತ ನಿರುದ್ಯೋಗಿಗಳಿಗೆ ಸಣ್ಣ ಕೈಗಾರಿಕೆಗಳನ್ನು ಸ್ಥಾಪನ ಮಾಡಲಿಕ್ಕೆ ಕೊಡುವ ಪ್ರೋತ್ಸಾಹಧನ ಇದು. ಪದವೀಧರನಾಗಿ ಹೊರಗೆ ಬರುವಾಗ ಆರ್ಥಿಕ ಸಂಸ್ಥೆಯಿಂದ ಒಂದು ಪ್ರಾಜೆಕ್ಟ್‌ರಿಪೋರ್ಟ್ ತಯಾರಿಸಿ 50 ಸಲ ಕೆಎಸ್‌ಎಫ್‌ಸಿಗೆ ಅಲೆದಾಡಿ ಕಷ್ಟಪಟ್ಟು ಒಂದು ಸಂಸ್ಥೆ ಸ್ಥಾಪನೆ ಮಾಡಿದ ಮೇಲೆ ಇವರು ಸಬ್ಸಿಡಿ ಕೊಡುತ್ತೇವೆ ಎಂದು ಹೇಳಿ ಇವತ್ತು ಸಬ್ಸಿಡಿ ಹಣವನ್ನು ಬೇರೆಯಲಿಕ್ಕೆ ಅವರಿಗೆ ನಾನಾ ಸವಲತ್ತು ಕೊಡುತ್ತೇವೆ ಎಂದು ಘೋಷಿಸುವ ಸರ್ಕಾರ ನಮ್ಮದೇ ಊರಿನ ವಿದ್ಯಾವಂತ ನಿರುದ್ಯೋಗಿಗಳು ಮುಂದೆ ಬರುವಾಗ ಈರೀತಿ ಅನ್ಯಾಯ ಮಾಡುವುದು ಸರಿಯೇ? ಅವರು ಹೇಳಲಿ, ಜಪ್ತಿಯಾಗುವಂತಹ ಘಟಕಗಳಿಗೆ ನೀವು ರಕ್ಷಣೆ ಕೊಡುತ್ತೀರಾ ಇಂತಹ ಮೂರು ಸಾವಿರಕ್ಕೂ ಹೆಚ್ಚು ಕೈಗಾರಿಕೆಗಳಿವೆ.

ಶ್ರೀ ಬಿ ಎ ಮೊಯಿದ್ದೀನ್:- ಕೊಡುತ್ತೇವೆ.

- ಗೊಂದಲ -

ಉಳ್ಳಾಲ ನಿವಾಸಿಯೊಬ್ಬರ ಮೇಲೆ ಅರಣ್ಯ ಸಿಬ್ಬಂದಿ ಗುಂಡುಹಾರಿಸಿ ಗಾಯಗೊಳಿಸಿರುವ ಬಗ್ಗೆ ಪರಿಹಾರ.

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ):- ಅಧ್ಯಕ್ಷರೇ ಮೇಲ್ಕಂಡ ವಿಷಯದ ಬಗ್ಗೆ ಸರ್ಕಾರದ ಗಮನ ನೆಳೆಯುತ್ತೇನೆ.

ಶ್ರೀ ಎಂ ಸಿ ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಅಧ್ಯಕ್ಷರೇ.

ದಿನಾಂಕ 29-12-1998 ರ ರಾತ್ರಿ ಸುಮಾರು 10.45ಕ್ಕೆ ಮಂಡಗದ್ದೆ ವಲಯ ಅರಣ್ಯಾಧಿಕಾರಿಗಳ ಕಛೇರಿಗೆ ಶ್ರೀ ಮಥಾನ್ ಎಂಬುವರು ಆವರ ಸ್ವಂತ ಮಾರುತಿ ಕಾರಿನಲ್ಲಿ ಬಂದು ಬಿಳಿ ಅಂಬಾಸಿಡರ್ ಕಾರಿನಲ್ಲಿ ಶಿವಮೊಗ್ಗ ಕಡೆಯಿಂದ ಶ್ರೀಗಂಧ ಕಳ್ಳ ಸಾಗಾಣಿಕೆ ಆಗುವುದೆಂದು ರಾತ್ರಿ ಸಿಬ್ಬಂದಿಗೆ ತಿಳಿಸಿದ ಮೇರೆಗೆ ಕಛೇರಿಯಲ್ಲಿ ಹಾಜರಿದ್ದ ಶ್ರೀ ಬಿ.ಟಿ. ಗೋಪಾಲ್, ವನಪಾಲಕ, ಶ್ರೀ ಟಿ.ಕೆ. ಶ್ರೀನಿವಾಸ್ ಮತ್ತು ಶ್ರೀ ಚನ್ನಯ್ಯ ಅರಣ್ಯ ರಕ್ಷಕರು ಇವರುಗಳು ಇಲಾಖಾ ಬಂದೂಕು ಸಮೇತ ಮಾಹಿತಿ ನೀಡಿದ ಆಸಾಮಿ ಕಾರಿನಲ್ಲಿ ಹೊರಟು ಮಂಡಗದ್ದೆ ಸಮೀಪ ರಸ್ತೆ ಬದಿ ಕಾಯುತ್ತಿದ್ದಾಗ, ಶಿವಮೊಗ್ಗ ಕಡೆಯಿಂದ ಬರುತ್ತಿದ್ದ ಬಿಳಿ ಅಂಬಾಸಿಡರ್ ಕಾರನ್ನು ಗಮನಿಸಿ ಆದನ್ನು ತಡೆದು ನಿಲ್ಲಿಸಲು ಸೂಚನೆ ನೀಡಿದಾಗ ಆ ಕಾರು, ಸಿಬ್ಬಂದಿ ಇದ್ದ ವಾಹನವನ್ನು ಹಿಂದೆ ಯಾಕೆ ತೀರ್ಥಹಳ್ಳಿಯ ಕಡೆಗೆ ವೇಗವಾಗಿ ಚಲಿಸತೊಡಗಿತು. ಸದರಿ ಕಾರನ್ನು ಹಿಮ್ಮೆಟ್ಟಿ ಮುಂದೆ ಹೋಗಿ ಅಡ್ಡಹಾಕಿ ಸಮವಸ್ತ್ರ ಧರಿಸಿದ ಸಿಬ್ಬಂದಿಗಳು ವಾಹನದಿಂದ ಇಳಿದು ಆ ಕಾರನ್ನು ನಿಲ್ಲಿಸುವಂತೆ ತಿಳಿಸಿದರೂ ಸಹ, ನಿಲ್ಲಿಸದೆ ಹಿಮ್ಮುಖವಾಗಿ ಚಲಿಸಲು ಪ್ರಾರಂಭಿಸಿತು ಸದರೀ ಬಿಳಿ ಅಂಬಾಸಿಡರ್ ಕಾರನ್ನು ನಿಲ್ಲಿಸಲು ಸಿಬ್ಬಂದಿಯವರಲ್ಲಿ ಒಬ್ಬರಾದ ಶ್ರೀ ಟಿ.ಕೆ. ಶ್ರೀನಿವಾಸ್, ಅರಣ್ಯ ರಕ್ಷಕ ಇವರು ಒಂದು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದರು. ಆದಾಗ್ಯೂ ಸಹ ಸದರೀ ಬಿಳಿ ಅಂಬಾಸಿಡರ್‌ನ ಚಾಲಕ ಕಾರನ್ನು ನಿಲ್ಲಿಸುವ ಉದ್ದೇಶದಿಂದ ಇಲಾಖೆಯ ಸಿಬ್ಬಂದಿಯವರಲೊಬ್ಬರಾದ ಶ್ರೀ ಟಿ.ಕೆ. ಶ್ರೀನಿವಾಸ್, ಅರಣ್ಯ ರಕ್ಷಕ ಇವರು ಬಿಳಿ ಅಂಬಾಸಿಡರ್ ಕಾರಿನ ಚಕ್ರಕ್ಕೆ ಇಲಾಖಾ ಬಂದೂಕಿನಿಂದ ಗುಂಡು ಹಾರಿಸಿದರು. ಅದು ಅಂಬಾಸಿಡರ್ ಕಾರಿನ ಚಕ್ರಕ್ಕೆ ತಗಲುವ ಬದಲು ಕಾರಿನ ಮುಂದಿನ ಬಾಗಿಲಿಗೆ ತಗಲಿ ಗಾಜುಗಳು ಒಡೆದು ಕಾರಿನೊಳಗಿದ್ದವರಿಗೆ ಗಾಯವಾಗಿರುವುದಾಗಿ ವಲಯ ಅರಣ್ಯಾಧಿಕಾರಿಗಳಿಂದ ತಿಳಿದು ಬಂದಿರುತ್ತದೆ.

ಮಾನ್ಯ ಶಾಸಕರು ತಮ್ಮ ಗಮನ ಸೆಳೆಯುವ ಸೂಚನೆಯಲ್ಲಿ ತಿಳಿಸಿರುವಂತೆ ಉದ್ದೇಶ ಪೂರ್ವಕವಾಗಿ, ರಸ್ತೆಯಲ್ಲಿ ಹೋಗುತ್ತಿದ್ದ ಕಾರಿಗೆ ಗುಂಡು ಹಾರಿಸುವ ಉದ್ದೇಶ ಇಲಾಖಾ ಸಿಬ್ಬಂದಿಗೆ ಇರಲಿಲ್ಲ. ಆದರೆ ಪ್ರಯಾಣಿಸುತ್ತಿದ್ದ ಅಂಬಾಸಿಡರ್ ಕಾರು ಅನುಮಾನಾಸ್ಪದವಾಗಿ ಚಲಿಸುತ್ತಿದ್ದರಿಂದ ಶ್ರೀಗಂಧದ ಕಳ್ಳಸಾಗಾಣಿಕೆ ಆಗುತ್ತಿದೆ ಎಂಬ ಅನುಮಾನದ ಮೇಲೆ ಸರ್ಕಾರದ ಸ್ವತ್ತನ್ನು ರಕ್ಷಿಸುವ ಒಂದೇ ಉದ್ದೇಶದಿಂದ ಗಾಲಿಯಲ್ಲಿ ಗುಂಡು ಹಾರಿಸಿಬೇಕಾಯಿತು. ಆದರೂ ವಾಹನವನ್ನು ನಿಲ್ಲಿಸದೇ ಹಿಮ್ಮುಖವಾಗಿ ಚಲಿಸಲು ಪ್ರಾರಂಭಿಸಿದಾಗ ಸದರಿ ಅಂಬಾಸಿಡರ್ ಕಾರನ್ನು ನಿಲ್ಲಿಸುವ ಉದ್ದೇಶದಿಂದ ಕಾರಿನ ಚಕ್ರಕ್ಕೆ ಹಾರಿಸಿದ ಗುಂಡು ಕಾರಿನ ಮುಂಬಾಗಿಲಿಗೆ ತಗುಲಿ ಗಾಜುಗಳು ಒಡೆದು ಆ ಕಾರಿನ ಒಳಗಿದ್ದ ಜನರಿಗೆ ಗಾಯಗಳಾಗಿರುತ್ತದೆ. ಇಂತಹ ಘಟನೆಗಳು ಈ ಹಿಂದೆಯೂ ನಡೆದುದ್ದರಿಂದ ಇವರೂ ಸಹ ಶ್ರೀಗಂಧದ ಕಳ್ಳಸಾಗಾಣಿಕೆ ಮಾಡುತ್ತಿರಬಹುದೆಂಬ ಅನುಮಾನಗೊಂಡು ಗುಂಡು ಹಾರಿಸಿರುತ್ತಾರೆ. ಈ ಹಿಂದೆಯೂ ಸಹ ಶ್ರೀಗಂಧ ಕಳ್ಳಸಾಗಾಣಿಕೆದಾರರು ಇದೇ ರೀತಿ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದಾಗ ಗುಂಡು ಹಾರಿಸಿದ ನಿದರ್ಶನಗಳು ಇವೆ.

ವಲಯ ಅರಣ್ಯಾಧಿಕಾರಿಗಳು ಗಾಯಗೊಂಡ ಪ್ರಯಾಣಿಕರನ್ನು ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ಕಳುಹಿಸಲು ಪ್ರಯತ್ನಿಸಿದಾಗ, ದೋಣಿಕಂಡಿಯ ಉದ್ರಿಕ್ತ ಗುಂಪಿನ ಜನರು ಇದಕ್ಕೆ

ಆಸ್ಪದ ನೀಡದೆ, ಪೋಲೀಸ್ ಸಿಬ್ಬಂದಿಯವರೆ ಸ್ಥಳಕ್ಕೆ ಬರಬೇಕೆಂದು ಆಗ್ರಹ ಪಡಿಸಿದ ಕಾರಣ ವಲಯ ಅರಣ್ಯಾಧಿಕಾರಿಗಳು ಪೋಲೀಸ್ ಠಾಣೆಗೆ ದೂರವಾಣಿ ಮೂಲಕ ವಿಷಯ ತಿಳಿಸಿರುತ್ತಾರೆ. ಉದ್ರಿಕ್ತ ಗುಂಪಿನ ಜನರು ಕರ್ತವ್ಯದ ಮೇಲಿದ್ದ ಅರಣ್ಯ ಸಿಬ್ಬಂದಿಯವರ ಸಮವಸ್ತ್ರಗಳನ್ನು ಕಿತ್ತು ಅವರ ಮೇಲೆ ಹಲ್ಲೆ ಮಾಡಿರುತ್ತಾರೆ.

ನಂತರ ಈ ಘಟನೆಗೆ ಸಂಬಂಧಪಟ್ಟಂತೆ ಪೋಲೀಸ್ ಇಲಾಖೆಯವರು ಕೇಸನ್ನು ದಾಖಲು ಮಾಡಿಕೊಂಡು ಶ್ರೀ ಬಿ.ಟಿ. ಗೋಪಾಲ್, ವನಪಾಲಕ ಹಾಗೂ ಶ್ರೀ ಟಿ.ಕೆ. ಶ್ರೀನಿವಾಸ್, ಅರಣ್ಯ ರಕ್ಷಕ ಇವರನ್ನು ದಸ್ತಗಿರಿ ಮಾಡಿರುತ್ತಾರೆ. ನಂತರ ಪೋಲೀಸ್ ಠಾಣೆಯಿಂದ ಸದರಿಯವರನ್ನು ಮಂಡಗದ್ದೆ ವಲಯಾರಣ್ಯಾಧಿಕಾರಿಗಳು ದಿನಾಂಕ 29-1-1998ರಂದು ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತಾರೆ. ಇಲಾಖೆಯ ಬಂದೂಕುಗಳು ಹಾಗೂ ಸಿಬ್ಬಂದಿ ಸಮವಸ್ತ್ರಗಳನ್ನು ಪೋಲೀಸರು ವಶಪಡಿಸಿಕೊಂಡಿರುತ್ತಾರೆ.

ದೋಣಿಕಂಡಿ ಗ್ರಾಮಸ್ಥರು ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಸಿಬ್ಬಂದಿಗಳಿಗೆ ಅಡಚಣೆ ಉಂಟು ಮಾಡಿದ್ದಕಾಗಿ ದಿನಾಂಕ 29-1-1998 ರಂದು ವಲಯ ಅರಣ್ಯಾಧಿಕಾರಿಗಳು ದೂರನ್ನು ನೀಡಿರುತ್ತಾರೆ. ಪೋಲೀಸ್ ಇಲಾಖೆಯಲ್ಲಿ ಪ್ರಕರಣವನ್ನು ಈ ಸಂಬಂಧ ನೊಂದಾಯಿಸಲಾಗಿರುತ್ತದೆ. ನೊಂದಾಯಿಸಿದ ಸಂಖ್ಯೆ: ಕ್ರೈಂ:15:98, ದಿನಾಂಕ 29-1-1998. ಗುಂಡು ಹಾರಿಸಿದ ತಕ್ಷಣ ಸರ್ಕಾರಿ ಆದೇಶ ಸಂಖ್ಯೆ: ಎಹೆಚ್ ಎಫ್ ಎಫ್ 30 ಎಫ್ ಎಸ್ ಡಬ್ಲ್ಯೂ 88, ದಿನಾಂಕ 20-9-1991ರ ಪ್ರಕಾರ ನಿಗಧಿತ ನಮೂನೆಯಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ರಕ್ಷಣಾಧಿಕಾರಿಗಳು ಉಪ ವಿಭಾಗಾಧಿಕಾರಿಗಳು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು, ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ಹಾಗೂ ಹತ್ತಿರದ ಪೋಲೀಸ್ ಠಾಣೆಗೆ ಮಾಹಿತಿಯನ್ನು ಒದಗಿಸಲಾಗಿದೆ. ಈ ಪ್ರಕರಣವನ್ನು ಮುಚ್ಚಿ ಹಾಕುವ ಯಾವುದೇ ಪ್ರಯತ್ನಗಳು ಅರಣ್ಯ ಇಲಾಖೆಯಿಂದ ನಡೆದಿರುವುದಿಲ್ಲ. ಪ್ರಕರಣದ ವಿಚಾರಣೆಯೂ ಪೋಲೀಸ್ ಇಲಾಖೆ ಹಾಗೂ ಭಿನ ನ್ಯಾಯಾಲಯದಲ್ಲಿ ನಡೆಯುತ್ತಿದೆ.

ಅರಣ್ಯ ಇಲಾಖೆಯ ಮೂಲಕ ಮೇಲ್ಕಂಡ ಘಟನೆ ಸಂಬಂಧ, ಅರಣ್ಯ ಮೊಕದ್ದಮೆ ದಾಖಲಿಸಿರುವುದಿಲ್ಲ. ಆದರೆ ಇಲಾಖೆಯ ಮೂಲಕ ದೂರನ್ನು ಪೋಲೀಸ್ ಠಾಣೆಗೆ ಕೂಡಲೇ ನೀಡಲಾಗಿದೆ. ಗಾಯಗೊಂಡ ಪ್ರಯಾಣಿಕರಿಗೆ ವೈದ್ಯಕೀಯ ಚಿಕಿತ್ಸೆಯನ್ನು ಮಾನವೀಯತೆ ದೃಷ್ಟಿಯಿಂದ ನೀಡಲು ಮುಂದಾದಾಗ ಈ ಇಲಾಖೆಯ ಅಧಿಕಾರಿಗಳಿಗೆ ದೋಣಿಕಂಡಿಯ ಕೆಲವು ಉದ್ರಿಕ್ತ ಜನರು ಅವಕಾಶ ನೀಡದಿದ್ದರಿಂದ ತುರ್ತು ಚಿಕಿತ್ಸೆ ಕೊಡಿಸಲು ಸಾಧ್ಯವಾಗಿರುವುದಿಲ್ಲ. ಪ್ರಕರಣವು ಪೋಲೀಸ್ ಇಲಾಖೆಯಲ್ಲಿ ಮತ್ತು ನ್ಯಾಯಾಲಯದಲ್ಲಿ ಇರುತ್ತದೆ. ಮತ್ತು ಪರಿಹಾರದ ಬಗ್ಗೆ ಗಾಯಗೊಂಡವರಾಗಲೀ ಅಥವಾ ಆವರ ಸಂಬಂಧಿಕರಿಂದಾಗಲೀ ಯಾವುದೇ ಮನವಿಗಳು ಅರಣ್ಯ ಇಲಾಖೆಗೆ ಬಂದಿರುವುದಿಲ್ಲ.

ಶ್ರೀ ಕೆ. ಜಯರಾಮಶೆಟ್ಟಿ : ಉಪಾಧ್ಯಕ್ಷರೇ, 28-1-98ರಂದು ಉಳ್ಳಾಲ ವಿಧಾನಸಭಾ ಕ್ಷೇತ್ರದ ನಿವಾಸಿಗಳಾದ ಶ್ರೀಮತಿ ಖತೀಜಾ ಬಿ, ಮಹಮದ್, ಮಹಮದ್ ರಫೀಕ್ ಮತ್ತು ಮಹಮದ್ ಸಲೀಂ ಎಂಬುವವರು ಶಿವಮೊಗ್ಗದ ತಮ್ಮ ಸಂಬಂಧಿಕರಾದ ಅಬ್ದುಲ್ ಬಷೀರ್

ಎಂಬುವರ ಮಗ ಅಶ್ರಫ್ ಮೃತಪಟ್ಟ ಕಾರಣ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಹೋಗಿದರು. ಹಿಂತಕ್ಕೆ ಬರುವಂತಹ ಸಂದರ್ಭದಲ್ಲಿ ಶಿವಮೊಗ್ಗದ ಮಂಡಗದ್ದೆ ಬಳಿಯಲ್ಲಿ ಕಾರ್ ನಂ. ಎ 25 ಎಂ 1314 ಅನ್ನು ಅರಣ್ಯಸಿಬ್ಬಂದಿ ತಡೆದುನಿಲ್ಲಿಸುವ ಪ್ರಯತ್ನ ಮಾಡಿದರು. ಅರಣ್ಯಸಿಬ್ಬಂದಿ ಕೆಎ 14 ಎಂ 2801 ಮಾರುತಿ ಓಮ್ನಿ ಕಾರ್‌ನಲ್ಲಿದ್ದರು. ಪೂರ್ಣವಾಗಿ ಚಳಿಯಾದ್ದರಿಂದ ಕಂಬಳಿ ಹೊದ್ದುಕೊಂಡಿದ್ದರಿಂದ ಇವರು ಅರಣ್ಯಾಧಿಕಾರಿಗಳೆಂದು ಕಾರ್‌ನಲ್ಲಿದ್ದವರಿಗೆ ಗೊತ್ತಿರಲಿಲ್ಲ. ಆಲ್ಲದೆ ಇಲಾಖೆಯ ಜೀಪೂ ಅಲ್ಲಿರಲಿಲ್ಲ, ಖಾಸಗಿ ಕಾರ್ ಇತ್ತು. ಅವರು ಕಂಬಳಿ ಹೊದ್ದು ಕೊಂಡಿದ್ದರಿಂದ ಇವರುಯಾರೋ ಕಳ್ಳರು ಅಥವಾ ಅರಣ್ಯಲೂಟಿಕೋರರೋ ಎಂಬ ವಿಚಾರದ ಮೇಲೆ ಸೀದಾ ಹೋಗುವಾಗ ಇವರನ್ನು ತಡೆಗಟ್ಟಿದಾಗ ಅವರು ಹೆದರಿ ವಾಪಸ್ ಕಾರನ್ನು ಹಿಂದಕ್ಕೆ ತಂದರು.

ಹಿಂದಕ್ಕೆ ಪಡೆದುಕೊಂಡ ಸಂದರ್ಭದಲ್ಲಿ ವಿನಾಕಾರಣ ಕಾರಿನ ಮೇಲೆ ಅರಣ್ಯಧಿಕಾರಿಗಳು ಮೂರು ಗುಂಡುಗಳನ್ನು ಹಾರಿಸಿದ ಪರಿಣಾಮವಾಗಿ ಕಟಿಜಮ್ಮ ಎಂಬುವವರು ಎರಡು ಕಣ್ಣುಗಳನ್ನು ಕಳೆದು ಕೊಂಡು ಶಾಶ್ವತವಾಗಿ ಕುರುಡರಾಗಿದ್ದಾರೆ. ಹಾಗೆಯೇ ಮಹಮದ್ ಎಂಬುವರು ಒಂದು ಕಣ್ಣನ್ನು ಕಳೆದುಕೊಂಡಿದ್ದು, ಮಹಮದ್ ಸಲೀಂ ಎಂಬುವವರ ಕೈಗೆ ಗಂಭೀರವಾದ ಗಾಯಗಳಾಗಿವೆ. ಅನಂತರ ಅವರುಗಳು ಅಲ್ಲಿಂದ ಮಸೀದಿಯೊಂದರ ಬಳಿ ಹಿಂದೆ ನಿಂತು ಬೊಬ್ಬೆ ಹಾಕಿದಾಗ ಅಲ್ಲಿ ಪೂರ್ಣ ಪ್ರಮಾಣದಲ್ಲಿ ಜನರು ಜಮಾಯಿಸಿದರು. ಇವರುಗಳನ್ನು ಅಲ್ಲಿಗೆ ಬೆನ್ನಟ್ಟಿ ಬಂದಂಥ ಅರಣ್ಯಾಧಿಕಾರಿಗಳು ಅವರನ್ನು ಹಿಡಿದುಕೊಂಡರಲ್ಲದೆ, ಅಲ್ಲಿನ ಸ್ಥಳೀಯರೂ ಸಹ ಹಿಡಿದುಕೊಂಡು ಪೋಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದರು. ಈಗ ಉದ್ಭವಿಸಿರುವ ಪ್ರಶ್ನೆಯೇನೆಂದರೆ, ಈ ಕುರಿತು ಪೋಲೀಸ್ ಕಂಪ್ಲೆಂಟ್ ಆಗಿದೆಯೆಂದು ಸರ್ಕಾರ ಹೇಳುತ್ತಿದೆ. ನನ್ನ ಕ್ಷೇತ್ರದ ಅನಾಮಧೇಯರಾದ ಅವರು ಶವ ಸಂಸ್ಕಾರಕ್ಕಾಗಿ ಶಿವಮೊಗ್ಗಕ್ಕೆ ಹೋಗಿದ್ದರಿಂದ ಅವರಿಗೆ ಕಾನೂನು ಅಥವಾ ಬೇರಾವುದೇ ವಿಚಾರ ಗೊತ್ತಿರುವುದಿಲ್ಲ, ಅವರುಗಳು ಪೂರ್ಣ ಹೆದರಿಕೊಂಡಿದ್ದರು. ಮತ್ತು ಅರಣ್ಯ ಇಲಾಖೆಯವರಾಗಲೀ ಅಥವಾ ಪೋಲೀಸಿನವರಾಗಲೀ ಅವರಿಗೆ ಆ ಸಂದರ್ಭದಲ್ಲಿ ತುರ್ತು ಚಿಕಿತ್ಸೆ ಕೊಡುವಂಥ ಯಾವುದೇ ರೀತಿಯ ವ್ಯವಸ್ಥೆಯನ್ನೂ ಕೂಡ ಅಲ್ಲಿ ಮಾಡಿರಲಿಲ್ಲ. ಅಲ್ಲದೇ, ಆ ಪ್ರಯಾಣಿಕರಿಗೆ ತಾವು ಸರ್ಕಾರಿ ಸಿಬ್ಬಂದಿಗಳೆಂಬ ವಿಷಯವನ್ನೂ ಕೂಡ ತಿಳಿಸಿಲಿಲ್ಲ. ಆದುದರಿಂದ, ಗಾಯಗೊಂಡಂಥ ಮೂರೂ ಜನರಿಗೆ ಕರ್ನಾಟಕ ಸರ್ಕಾರ ಪೂರ್ಣ ಪ್ರಮಾಣದ ಪರಿಹಾರ ಕೊಡಬೇಕು. ಎರಡನೆಯದಾಗಿ, ಸಂಬಂಧಪಟ್ಟ ತಪ್ಪಿತಸ್ಥರ ಮೇಲೆ ಸರ್ಕಾರ ಕ್ರಮ ಕೈಗೊಳ್ಳಬೇಕು ಮತ್ತು ಸದರಿ ಪ್ರಕರಣವನ್ನು ಸಿ.ಓ.ಡಿ.ಗೆ ಒಪ್ಪಿಸಿ ಆಮೂಲಾಗ್ರವಾಗಿ ತನಿಖೆ ನಡೆಸಬೇಕೆಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ಏಕೆಂದರೆ, ಓಮ್ನಿ ಕಾರು ಗಂಧ ಲೂಟಿ ಮಾಡುವವರ ಕಾರು ಆಗಿತ್ತೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆ ಓಮ್ನಿ ಕಾರು ಇಲಾಖೆಗೆ ಸಂಬಂಧಿಸಿದ್ದಲ್ಲ. ಆದು ಗಂಧ ಲೂಟಿ ಮಾಡುವವರ ಕಾರು ಆಗಿರುವುದರಿಂದ ಇದರಲ್ಲಿ ಏನೋ ಒಳಸಂಚು ಇದ್ದು, ಯಾವುದೋ ಒಂದು ಪ್ರಕರಣವನ್ನು ಉದ್ದೇಶಪೂರ್ವಕವಾಗಿ ಮತ್ತೊಬ್ಬರ ಮೇಲೆ ಹೊರಿಸುವಂಥ ಒಂದು ಷಡ್ಯಂತ್ರ ಇಲ್ಲಿ ನಡೆದಿರುವುದರಿಂದ ಈ ಪ್ರಕರಣವನ್ನು ಸಿ.ಓ.ಡಿ.ಗೆ ವಹಿಸಿ ತನಿಖೆ ಮಾಡಿಸಿ ತಪ್ಪಿತಸ್ಥರನ್ನು ಕಂಡುಹಿಡಿದು ಅವರ ಮೇಲೆ ಕ್ರಮ

ಕೈಗೊಳ್ಳಬೇಕು. ಶಾಶ್ವತವಾಗಿ ಕಣ್ಣುಗಳನ್ನು ಕಳೆದುಕೊಂಡ ಮೂರು ಜನರು ಮಂಗಳೂರಿನ ಮಣಿಪಾಲ್ ಮುಂತಾದ ಬೇರೆ ಕಡೆಯ ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ದಾಖಲಾಗಿರುವ ಬಗ್ಗೆ ನನ್ನ ಬಳಿ ಸಂಪೂರ್ಣ ದಾಖಲೆಯಿದ್ದು, ಮುಂದಿನ ಕ್ರಮಕ್ಕಾಗಿ ಆದನ್ನು ತಮಗೆ ಕಳುಹಿಸಿಕೊಡುತ್ತೇನೆ. ಆವರುಗಳನ್ನು ಮಾನವೀಯ ದೃಷ್ಟಿಯಿಂದ ನಡೆಸಿಕೊಂಡು ಸರ್ಕಾರದ ವತಿಯಿಂದ ಯೋಗ್ಯ ಪರಿಹಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಈ ಘಟನೆ ನಡೆದಿರುವುದು ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆಯಲ್ಲಿ. ಮಂಡಗದ್ದೆ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು, ಆಲ್ಲಿ ಆರಣ್ಯ ಕಳ್ಳರು ಸಾಕಷ್ಟು ಪ್ರಮಾಣದಲ್ಲಿ ಗಂಧ ಮತ್ತು ಬೀಟೆ ಮರಗಳನ್ನು ಲೂಟಿ ಮಾಡುತ್ತಿರತಕ್ಕ ಸ್ಥಳವಾಗಿದೆ. ಆಲ್ಲಿ ಕಾರ್ಯನಿರ್ವಹಿಸುತ್ತಿರುವ ಆರಣ್ಯ ಸಿಬ್ಬಂದಿಗಳು ತಮ್ಮ ಜೀವನವನ್ನು ಮುಡುಪಾಗಿಟ್ಟು ದುಡಿಯುತ್ತಿದ್ದಾರೆ. ಅವರಿಗೆ ನಾವೆಲ್ಲರೂ ಪಕ್ಷಭೇದ ಮರೆತು ಸಹಕಾರ ಕೊಡತಕ್ಕಂಥಾದ್ದು ತುಂಬಾ ಅವಶ್ಯ. ಏಕೆಂದರೆ, ಹಿಂದೆ ಆಲ್ಲಿ ಕೆಲಸ ಮಾಡಿರತಕ್ಕ ಅರಣ್ಯಾಧಿಕಾರಿಗಳಿರಬಹುದು, ಈಗ ಕೆಲಸ ಮಾಡುತ್ತಿರತಕ್ಕಂಥ ವನ ಪಾಲಕರಿರಬಹುದು, ಅವರುಗಳು ತಮ್ಮ ಜೀವದ ಹಂಗನ್ನು ತೊರೆದು ಅನೇಕ ಸಂದರ್ಭಗಳಲ್ಲಿ ಅವರ ಕೊಲೆಗೂ ಸಂಚು ನಡೆದಿದೆ. ಇಂತಹ ಸಂದರ್ಭದಲ್ಲಿ ಅವರು ತಮ್ಮ ಕಾರ್ಯನಿರ್ವಹಿಸುತ್ತಿರುವಾಗ ಆಪ್ಪೊತ್ತು ಕಾರು ಬಂದಾಗ ಮಾಹಿತಿ ಕೊಟ್ಟಿರತಕ್ಕಂಥವರು....., ಮಾಹಿತಿ ಕೊಟ್ಟು ತನ್ನ ಕಾರಿನಲ್ಲಿ ಬಂದು ವನ ಪಾಲಕರನ್ನು ಕರೆದುಕೊಂಡು ಹೋಗಿರುವವನು ಒಬ್ಬ ಸ್ಮಗ್ಲರ್. ಆತ ನಾಲ್ಕೈದು ಬಾರಿ ಗಂಧದ ಕಳ್ಳ ಸಾಗಾಣಿಕೆ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡಿರುವರನು. ಆದರೂ ಕೂಡ ಬಂದು ಮಾಹಿತಿ ಸಿಕ್ಕಿದೆಯೆಂದು ಹೇಳಿದ ತಕ್ಷಣ ರೇಂಜರ್‌ಗೂ ಕೂಡ ಗೊತ್ತಿಲ್ಲದಂತೆ, ಅವರಿಗೂ ಕೂಡ ಹೋಗಿ ಹೇಳುವಷ್ಟು ವ್ಯವಧಾನವಿಲ್ಲದೆ ಹಿಡಿಯೋಣವೆಂದು ಅತಿ ಉತ್ಸಾಹದಿಂದ ಓಡಿ ಹೋಗಿದ್ದಾರೆ. ಆಗ ಆ ಕಾರು ನಿಲ್ಲದಿರುವ ಸ್ಥಿತಿಯಲ್ಲಿ ಕಂಡುಬಂದಾಗ ಖಂಡಿತವಾಗಿಯೂ ಆದು ಸ್ಮಗ್ಲರ್ ಕಾರು ಎಂದು ತಿಳಿದುಕೊಂಡು ಆದರ ಮೇಲೆ ಫೈರ್ ಮಾಡಿದ್ದಾರೆ, ಇದು ತುಂಭಾ ಆಚಾತುರ್ಯದಿಂದಾಗಿದೆ. ಆದರೆ, ವಿಶೇಷವಾಗಿ ಇಲ್ಲಿ ಕ್ರಮ ಕೈಗೊಳ್ಳ ತಕ್ಕಂಥಾದ್ದು ಏನೆಂದರೆ, ಯಾರು ಅರಣ್ಯ ಸಿಬ್ಬಂದಿಯನ್ನು ಕರೆದುಕೊಂಡು ಹೋಗಿ ಅವರನ್ನು ಬಿಟ್ಟು ಓಡಿ ಹೋಗಿ ಅಲ್ಲಿನ ಸ್ಥಳೀಯ ಊರಿನ ಜನರೆಲ್ಲರನ್ನೂ ಒಗ್ಗೂಡಿಸಿಕೊಂಡು ಅರಣ್ಯ ಸಿಬ್ಬಂದಿಯರರ ಮೇಲೆ ಹಲ್ಲೆ ಮಾಡಿದ್ದರಿಂದ, ಇಬ್ಬರು ಅರಣ್ಯ ಸಿಬ್ಬಂದಿಗಳು ಮರಣಾವಸ್ಥೆ ಯಲ್ಲಿದ್ದಾರೆ, ಆ ರೀತಿ ಹೊಡೆದಿದ್ದಾರೆ. ಮತ್ತು ಸದರಿ ಪ್ರಕರಣದಲ್ಲಿ ಇಬ್ಬರು ಯಾರು ಕಣ್ಣನ್ನು ಕಳೆದುಕೊಂಡಿದ್ದಾರೆ, ಅವರ ಬಗ್ಗೆ ನಮ್ಮೆಲ್ಲರ ಸಹಾನುಭೂತಿ ಇದೆ. ನಾನು ಶಾಸಕನಾಗಿ ಆ ಸ್ಥಳಕ್ಕೆ ಭೇಟಿ ಕೊಟ್ಟು ನೋಡಿ ಬಂದಿದ್ದೇನೆ. ಅವರಿಗೆ ಗಂಭೀರ ಗಾಯಗಳಾಗಿವೆ. ಮಾನ್ಯ ಸದಸ್ಯರಾದ ಶ್ರೀ ಜಯರಾಮಶೆಟ್ಟಿಯವರು ಹೇಳುತ್ತಿರುವುದು ಸರಿ. ಆದರೆ, ಅದೇ ಸಂದರ್ಭದಲ್ಲಿ ಅಲ್ಲಿಂರತಕ್ಕ ಕೆಲವು ಆರಣ್ಯ ಸಿಬ್ಬಂದಿಯವರ ಮೇಲಾಗಿರುವ ಹಲ್ಲೆ ಕೂಡ ಅಮಾನುಷವಾಗಿದೆ. ಅಲ್ಲದೆ, ಮೊದಲಿನ ದಿವಸ ಅಲ್ಲೊಂದು ಕೊಲೆಯಾಗಿದೆ. ನಂತರ, ಅಲ್ಲಿನ 5-6 ಮನೆಗಳನ್ನು ಶೋಧಿಸಿದಾಗ ಗಂಧ, ಬೇಟೆ ಮತ್ತು ಪ್ರಾಣಿಗಳ ಚರ್ಮ ಸಿಕ್ಕಿದೆ. ಅಲ್ಲಿರುವ ಕೆಳವು ಮನೆಗಳು ಸ್ಮಗ್ಲರ್ಸ್‌ಗೆ ಸೇರಿದವಾಗಿದ್ದು, ಆವರು ಇದೇ ದಂದೆಯಲ್ಲಿ

ತೊಡಗಿರುವರರಾದ್ದರಿಂದ ಅವರುಗಳ ಮೇಲೆ ಕ್ರಮ ಕೈಗೊಳ್ಳಬೇಕು. ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಅರಣ್ಯ ಸಿಬ್ಬಂದಿಗಳಿಗೆ ಸೂಕ್ತ ರಕ್ಷಣೆ ಸಿಗಬೇಕು. ಅವರಿಗೆ ವಿಶೇಷವಾದ ಇನ್‌ಸ್ಟ್ರುಮೆಂಟ್‌ಗಳನ್ನು ಕೊಡಬೇಕೆಂದು ನಾನು ಒತ್ತಾಯಿಸುತ್ತಾ ಬಂದಿದ್ದೇನೆ. ದಯಮಾಡಿ ಅವರಿಗೆ ಸುಸಜ್ಜಿತವಾದ ವಾಹನ ಕೊಡಬೇಕು. ಅವರು ಖಾಸಗಿ ಕಾರಿನಲ್ಲಿ ಹೋಗಿದ್ದರಿಂದ ಈ ಆಚಾತುರ್ಯ ಸಂಭವಿಸಿದೆ. ಉಳ್ಳಾಲದ ಕಾರಿನವರು ನಿಲ್ಲಿಸಲಿಲ್ಲವಾದ ಕಾರಣ ಯಾರೋ ದರೋಡೆಕಾರರೆಂದು ತಿಳಿದುಕೊಂಡು ಈ ದುರ್ಘಟನೆ ಸಂಭವಿಸಿದೆ. ಅಲ್ಲಿನ ಸಿಬ್ಬಂದಿಗೆ ವಾಹನ, ವೈರ್‌ಲೆಸ್ ಸೆಟ್ ಮುಂತಾದ ಉಪಕರಣಗಳ ಸೌಲಭ್ಯ ಕೊಟ್ಟಾಗ ಮಾತ್ರ ಅವರ ರಕ್ಷಣೆಯಾಗುತ್ತದೆ. ಇದು ಅತ್ಯಂತ ಸೂಕ್ಷ್ಮವಾದ ಪ್ರದೇಶವಾಗಿರುವುದಲ್ಲದೆ ಅತ್ಯಂತ ದುರ್ಗಮವಾದ ಕಾಡಾಗಿದ್ದು ದರೋಡೆ ನಡೆಯುತ್ತದಾದ್ದರಿಂದ ಅರಣ್ಯ ಸಿಬ್ಬಂದಿಯವರಿಗೆ ರಕ್ಷಣೆ ಒದಗಿಸುವುದಕ್ಕೆ ಸರ್ಕಾರ ವಿಶೇಷ ಆಸ್ಥೆ ವಹಿಸುವುದು ತುಂಬಾ ಒಳ್ಳೆಯದೆಂದು ಹೇಳಬಯಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಿತ್ರರಾದ ಅರಗ ಜ್ಞಾನೇಂದ್ರರವರು ಅಲ್ಲಿ ನಡೆದ ಘಟನೆಯ ವಸ್ತುಸ್ಥಿತಿಯನ್ನು ವಿವರಿಸಿರುವುದರಿಂದ ಬಹುಶಃ ಜಯರಾಮಶೆಟ್ಟಿಯವರಿಗೆ ಇದರಿಂದ ಸ್ವಲ್ಪಮಟ್ಟಿಗೆ ಸಮಾಧಾನ ವಾಗಿರಬಹುದೆಂದು ಕಾಣುತ್ತದೆ. ಕಾರಣ, ಅವರೂ ಕೂಡ ಆದೇ ಕ್ಷೇತ್ರಕ್ಕೆ ಸೇರಿರುವಂಥವರು. ನಿಜವಾಗಿಯೂ ತೀರ್ಥಹಳ್ಳಿ, ಮಂಡಗದ್ದೆ ಇನ್ನು ಸುಮಾರು ಭಾಗಗಳೇನಿವೆ, ಅವೆಲ್ಲವೂ ಸಗ್ಗರ್ಸ್ ಪ್ಯಾರಡೈಸ್ ಆಗಿದೆ. ರಾತ್ರೋರಾತ್ರಿ ಅಲ್ಲಿನ ಕಾಡಿನ ಸಂಪತ್ತನ್ನು ಕಡಿದುಕೊಂಡು ಹೋಗುವಂಥ ಪರಿಸ್ಥಿತಿ ಇದೆ. ಬಹುಶಃ ಈ ದುರ್ಘಟನೆ ಬಗ್ಗೆ ಇಟ್ ವಾಸ್ ಎ ಮಿಸ್ಟೇಕನ್ ಐಡೆಂಟಿಟಿ ಎಂದು ಸಿಬ್ಬಂದಿಯವರು ಹೇಳುತ್ತಾರೆ. ಅವರಿಗೆ ಸಿಕ್ಕಿರುವ ಮಾಹಿತಿ ಏನೆಂದರೆ, ಬಿಳಿ ಅಂಬಾಸಿಡರ್ ಕಾರಿನಲ್ಲಿ ಗಂಧವನ್ನು ಸಾಗಿಸುತ್ತಿದ್ದಾರೆಂಬುದು. ಈ ಮಾಹಿತಿ ದೊರೆತ ಕೂಡಲೇ ಅರಣ್ಯ ಸಿಬ್ಬಂದಿ ಬಳಿ ಯಾವುದೇ ತರಹದ ವಾಹನವಿರಲಿಲ್ಲ; ಯಾರು ಮಾಹಿತಿ ಕೊಟ್ಟರೋ ಅವರ ಕಾರಿನಲ್ಲೇ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಯಿತು. ಆದರೆ, ದುರದೃಷ್ಟವಶಾತ್ ಏನಾಯಿತೆಂದರೆ, ಅವರು ಮಾಹಿತಿ ಕೊಟ್ಟ ಸಂದರ್ಭದಲ್ಲಿ ಬಿಳಿ ಅಂಬಾಸಿಡರ್ ಕಾರು ಅರಣ್ಯ ಸಿಬ್ಬಂದಿಯವರು ಪಹರೆ ಕಾಯುತ್ತಿದ್ದ ಜಾಗದಲ್ಲಿ ಬರುತ್ತಿತ್ತು. ಇದರಿಂದ ಅವರಿಗೆ ಏನಾಯಿತೆಂದರೆ, ಇಟ್ ವಾಸ್ ಎ ಮಿಸ್ಟೇಕನ್ ಐಡೆಂಟಿಟಿ. ಆದರೂ ಅವರು ಏನು ಮಾಡಿದರೆಂದರೆ, ಇಳಿದು ಸದರಿ ಕಾರನ್ನು ನಿಲ್ಲಿಸಿದಾಗ ಸ್ವಲ್ಪ ಅವರು ಹೆದರಿ ಕೊಂಡಿದಲಿಕ್ಕೂ ಸಾಕು. ಆಗ ರಾತ್ರಿ ಸುಮಾರು ಹತ್ತು ಮುಕ್ಕಾಲು, ಹನ್ನೊಂದು ಗಂಟೆಯಾಗಿತ್ತು. ಪ್ರಯಾಣಿಕರ್ಯಾರೋ ನಮ್ಮ ಕಾರಿಗೆ ಅಡ್ಡ ಬರುತ್ತಿದ್ದಾರೆಂದು ಹೆದರಿಕೊಂಡಿರುವುದಕ್ಕೂ ಸಾಕು. ಆ ಸಂದರ್ಭದಲ್ಲಿ ಏನಾಯಿತೆಂದರೆ, ಇದೇ ಕಾರಿನಲ್ಲಿ ಗಂಧ ಸಾಗಾಣಿಕೆಯಾಗುತ್ತಿರುವುದರಿಂದ ಬೇರೆಯವರು ನಮ್ಮನ್ನು ಆಟ್ಟಿಸಿಕೊಂಡು ಬರುತ್ತಿದ್ದಾರೆಂಬ ಬಗ್ಗೆ ಇವರ ಮನಸ್ಸಿನಲ್ಲಿ ಸಂಶಯಕ್ಕೆಡೆಯುಂಟಾಗಿ, ಅಲ್ಲದೆ, ಅರಣ್ಯ ಸಿಬ್ಬಂದಿಯವರೂ ಸಹ ಇದೇ ರೀತಿ ಸಂಶಯದಿಂದ ಕಾರಿನಲ್ಲಿ ಗಂಧವನ್ನು ಸಾಗಾಣಿಕೆ ಮಾಡುತ್ತಿರಬಹುದೆಂದು ಗುಂಡು ಹಾರಿಸಿದಾಗ ಆ ಗುಂಡು ಚಕ್ರಕ್ಕೆ ಬೀಳುವುದರ ಬದಲು ಗ್ಲಾಸಿಗೆ ಬಿದ್ದು ಒಳಗಡೆ ರಿಫ್ಲೆಕ್ಟ್ ಆಯಿತು. ಇದು ಆಚಾತುರ್ಯವೇನಲ್ಲ. ಅರಣ್ಯ ಸಿಬ್ಬಂದಿಯವರು ಮಾಡಬೇಕಾಗಿರತಕ್ಕ ಕರ್ತವ್ಯ ಇದಾಗಿದೆ. ರಾತ್ರಿ ಹೊತ್ತು ಗಸ್ತು ತಿರುಗಿಕೊಂಡು ತಮ್ಮ ಕಾರ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಮಾಹಿತಿಯಂತೆ

ಬಿಳಿ ಅಂಬಾಸಿಡರ್ ಕಾರು ಬಂದಿದ್ದು ಎಲ್ಲವೂ ಕೂಡ ಸರಿಯಾಯಿತು. ಆದರೆ, ದುರದೃಷ್ಟವಶಾತ್, ಅಲ್ಲಿದ್ದ ವ್ಯಕ್ತಿಗಳು ಯಾರಿದ್ದರು, ಅವರು ಈ ಒಂದು ಅಕ್ರಮದಲ್ಲಿ ತೊಡಗಿದವರಲ್ಲ. ಅವರು ಶವ ಸಂಸ್ಕಾರಕ್ಕೆ ಹೋಗಿ ಹಿಂದೆ ಬರುತ್ತಿದ್ದರೆಂದು ಪತ್ರಿಗೆಯಲ್ಲಿ ವರದಿಯಾಗಿದೆ. ಇದು ಅರಣ್ಯ ಸಿಬ್ಬಂದಿಗಳು ಉದ್ದೇಶಪೂರ್ವಕವಾಗಿ ಮಾಡಿರತಕ್ಕ ಕೆಲಸವಲ್ಲ. ಅವರು ಸರ್ಕಾರದ ಕರ್ತವ್ಯ ನಿರ್ವಹಿಸಿ ಅರಣ್ಯವನ್ನು ರಕ್ಷಣೆ ಮಾಡುತ್ತಿರುವ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಹೇಳಿದಂತೆ ಕೆಲವೊಂದು ಸಂದರ್ಭಗಳಲ್ಲಿ ಅರಣ್ಯ ಪಾಲಕರು ಮತ್ತು ಅರಣ್ಯ ಸಿಬ್ಬಂದಿಗಳು ಬಹಳ ಕ್ಲಿಷ್ಟಕರವಾದ ಪರಿಸ್ಥಿತಿಯನ್ನು ಕೂಡ ಎದುರಿಸಬೇಕಾಗುತ್ತದೆ. ಉದಾಹರಣೆಗೆ, ಹೇಳುವುದಾದರೆ, ಕೊಡಗು ಜಿಲ್ಲೆಯಲ್ಲಿ ಕೆಲವು ದಿವಸಗಳ ಹಿಂದೆ ಕೇರಳದ ಗಡಿ ಭಾಗದಲ್ಲಿ ಕಳ್ಳ ಸಾಗಾಣಿಕೆದಾರರು ಬರುತ್ತಿದ್ದಂಥ ಸಂದರ್ಭದಲ್ಲಿ ಕೆಲವು ದಿವಸಗಳ ಹಿಂದೆ ಕೇರಳದ ಗಡಿ ಭಾಗದಲ್ಲಿ ಕಳ್ಳ ಸಾಗಾಣಿಕೆದಾರರು ಗುಂಡು ಹೊಡೆದಾಗ ಅರಣ್ಯದಲ್ಲಿ ಕೆಲಸ ಮಾಡುವ ಸರ್ಕಾರಿ ಸಿಬ್ಬಂದಿ ಸ್ಥಳದಲ್ಲೇ ಸಾವನ್ನಪ್ಪಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಆದುದರಿಂದ, ನೀವು ಪ್ರಸ್ತಾಪಿಸಿರುವ ಒಂದು ವಿಷಯವನ್ನು ಮಾತ್ರ ನಾನು ಸರ್ಕಾರದ ವತಿಯಿಂದ ಒಪ್ಪುತ್ತೇನೆ. ಅದು ಯಾವುದೆಂದರೆ, ಇದೊಂದು ದುರಾದೃಷ್ಟಕರ ಘಟನೆಯಾಗಿದ್ದು, ಇದರಿಂದ ಮೂರು ಜನರಿಗೆ ಗುಂಡಿನ ಏಟು ಬಿದ್ದಿರುವ ಪ್ರಯುಕ್ತ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ಅವರಿಗಾಗಿರುವ ಖರ್ಚು ವೆಚ್ಚಗಳಿಗೆ ಸಂಬಂಧಿಸಿದ ಮಾಹಿತಿಯನ್ನು ದಯವಿಟ್ಟು ಇಲಾಖಾಧಿಕಾರಿಗಳಿಗೆ ಕೊಡುವುದಕ್ಕೆ ಹೇಳಿ, ತಾವು ಈ ಕುರುತು ಕೆಲವು ಮಾಹಿತಿಗಳನ್ನು ಕೊಟ್ಟಿದ್ದೇರಿ. ನಾನು ಕೂಡಲೇ ಆ ಭಾಗದಲ್ಲಿರುವ ಅರಣ್ಯ ಇಲಾಖಾಧಿಕಾರಿಗಳಿಗೆ ಈ ಸಂಬಂಧ ಕೆಲವು ವಿಚಾರಗಳನ್ನು ಹೇಳಿ ಈಗಾಗರೇ ಸೂಚನೆ ಕೊಟ್ಟಿದ್ದು, ಅಲ್ಲಿನ ಸ್ಥಳೀಯ ಅರಣ್ಯಧಿಕಾರಿಗಳು ಅವರ ಮನೆಗೆ ಹೋಗಿ ದುರ್ಘಟನೆಯಲ್ಲಿ ಗಾಯಗೊಂಡು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಅವರಿಗಾಗಿರುವ ಖರ್ಚು ವೆಚ್ಚ ಮುಂತಾದ ಸಂಪೂರ್ಣ ವಿವರಗಳನ್ನು ಕೊಡಬೇಕೆಂದು ಹೇಳುತ್ತೇವೆ. ಸರ್ಕಾರ ಇದರ ಬಗ್ಗೆ ಪರಿಹಾರ ಒದಗಿಸಿಕೊಡುವುದಕ್ಕೆ ನಾವಂತೂ ಹಿಂದು-ಮುಂದು ನೋಡುವುದಿಲ್ಲ. ಆಗಿರುವ ಘಟನೆ ಬಗ್ಗೆ ಹೇಳುವುದಾದರೆ ನಿಜರಾಗಿಯೂ ಸರ್ಕಾರಕ್ಕೆ ಕ್ರಮ ಕೈಗೊಳ್ಳುತ್ತದೆ ಮತ್ತು ಅರಣ್ಯ ಕಾಪಾಡುತ್ತಿರತಕ್ಕಂಥ ಅರಣ್ಯ ಸಿಬ್ಬಂದಿಗಳು ಯಾರಿದ್ದಾರೆ, ಈಗಾಗಲೇ ನಾನು ಅವರ ಜೊತೆ ಚರ್ಚಿಸಿದ್ದು ಅವರಿಗೆ ಸೊಫಿಸ್ಟಿಕೇಟೆಡ್ ವೆಪನ್ಸ್ ಕೊಡಬೇಕು, ಕೆಲವು ಸಂದರ್ಭಗಳಲ್ಲಿ ಅವರಿಗೆ ವಾಹನ ಸೌಲಭ್ಯವನ್ನೂ ಕೊಡಬೇಕಾಗುತ್ತದೆ. ಕಳ್ಳಕಾಕರಿಂದ ಅರಣ್ಯವನ್ನು, ಅರಣ್ಯ ಸಂಪತ್ತನ್ನು ರಕ್ಷಿಸುವುದಕ್ಕೆ ಇಲಾಖೆ ವತಿಯಿಂದ ಅವರುಗಳಿಗೆ ಹಲವಾರು ರೀತಿಯ ಸೌಕರ್ಯ ಒದಗಿಸಬೇಕಾಗಿರತಕ್ಕ ಕಾರ್ಯಕ್ರಮವನ್ನು ಈಗಾಗಲೇ ಹಮ್ಮಿಕೊಳ್ಳಲು ಒಂದು ಯೋಜನೆ ಕೈಗೊಳ್ಳಲಾಗಿದೆ ಯೆಂದು ಶ್ರೀಮಾನ್ ಅರಗ ಜ್ಞಾನೇಂದ್ರರವರಿಗೆ ಹೇಳುತ್ತಾ, ಇನ್ನು ಶ್ರೀ ಜಯರಾಮಶೆಟ್ಟಿಯವರಿಗೆ ತಿಳಿಸುವುದೇನೆಂದರೆ, ಆಗಿರುವ ಘಟನೆಯಾವುದಿದೆ, ಇದು ನಿಜವಾಗಿಯೂ ಒಂದು ಮಿಸ್ಟೇಕನ್ ಐಡೆಂಟಿಟಿ. ಇದಕ್ಕೆ ಸರ್ಕಾರದವತಿಯಿಂದ ನಾನು ವಿಷಾದ ವ್ಯಕ್ತಪಡಿಸುತ್ತಿದ್ದೇನೆ. ಸ್ಥಳದಲ್ಲಿ ರಾತ್ರಿ ಹೊತ್ತು ಹೋಗುತ್ತಿದ್ದವರು ಪಾಪದ ಜನರು, ಅಮಾಯಕರಾಗಿದ್ದು ದರೋಡೆಕಾರರು ನಮ್ಮನ್ನು ಹಿಂಬಾಲಿಸಿ ಬರುತ್ತಿದ್ದಾರೆಂದು ಸಂಶಯ ಪಟ್ಟಿದ್ದರೆ, ಇನ್ನೊಂದೆಡೆ, ಈ ಜನರು ಅರಣ್ಯ ಸಂಪತ್ತನ್ನು ಕದ್ದುಕೊಂಡು ಹೋಗುತ್ತಿದ್ದಾರೆಂದು ಅರಣ್ಯ ಸಿಬ್ಬಂದಿಗಳ ಮನಸ್ಸಿನಲ್ಲಿ ಕೂಡ ಸಂಶಯ ಬಂದಿದ್ದರಿಂದ ಈ ದುರ್ಘಟನೆ ನಡೆದಿದೆ. ಇದು

ಉದ್ದೇಶಪೂರ್ವಕವಾಗಿ ನಡೆದಂಥ ಘಟನೆಯಲ್ಲವೆಂದು ಮತ್ತು ಸದರಿ ಪ್ರಕರಣದಲ್ಲಿ ಸಿ.ಓ.ಡಿ.ಯಿಂದ ತನಿಖೆ ನಡೆಸಬೇಕಾದ ಅಗತ್ಯವೂ ಇಲ್ಲ. ಸಿ.ಓ.ಡಿ.ಯಿಂದ ತನಿಖೆ ನಡೆಸಿ ಅದರಿಂದ ಬರುವುದಾದರೂ ಏನು? ಆದುದರಿಂದ, ನಾವು, ನೀವೆಲ್ಲರೂ ಸೇರಿ ಪರಿಹಾರ ಕೊಡುವುದಕ್ಕೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಸರ್ಕಾರದ ವತಿಯಿಂದ ಕೈಗೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಜಯರಾಮಶೆಟ್ಟಿ: ತಮ್ಮ ಇಲಾಖೆಯವರು ಮಂಗಳೂರಿನಿಂದ ಗಾಯ ಗೊಂಡವರ ಕುಟುಂಬದವರನ್ನು ಸಂಪರ್ಕಿಸುವುದು ಒಳ್ಳೆಯದು. ಏಕೆಂದರೆ, ಆ ಕುಟುಂಬದವರಿಗೆ ಯಾವುದೇ ವಿದ್ಯಾಭ್ಯಾಸವಿಲ್ಲ, ಆರ್ಥಿಕ ಚೈತನ್ಯ ಕೂಡ ಇಲ್ಲವಾದ್ದರಿಂದ ಸರ್ಕಾರದ ಕಡೆಯಿಂದ ಅವರುಗಳ ಮನೆಗಳಿಗೆ ಭೇಟಿಯಿತ್ತು ವಿಚಾರಿಸಬೇಕು. ಅವರು ತಮ್ಮ ಎರಡೂ ಕಣ್ಣುಗಳನ್ನು ಕಳೆದುಕೊಂಡಿದ್ದಾರೆ, ಮತ್ತೊಬ್ಬರು ತಮ್ಮ ಒಂದು ಕಣ್ಣನ್ನು ಕಳೆದುಕೊಂಡಿದ್ದು ಮನೆಯಿಂದ ಹೊರಗಡೆ ಬರುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು: ತಾವು ಆ ಕುರಿತು ಮಾಹಿತಿ ಒದಗಿಸಿಕೊಡಿ, ಪರಿಹಾರ ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರಲ್ಲಾ.

ಶ್ರೀ ಎಂ.ಸಿ. ನಾಣಯ್ಯ: ಆ ಕ್ಷೇತ್ರಕ್ಕೆ ಸಂಬಂಧಿಸಿದ ಕನ್ಸರ್ವೇಟರ್ ಆಫ್ ಫಾರೆಸ್ಟ್ ಅಥವಾ ಡಿವಿಜನಲ್ ಫಾರೆಸ್ಟ್ ಆಫೀಸರ್ ಯಾರಿದ್ದಾರೆ, ಅವರನ್ನು ಕಳುಹಿಸಿ ಸಂಪೂರ್ಣವಾದ ಮಾಹಿತಿ ತೆಗೆದುಕೊಂಡು ಸರ್ಕಾರದ ವತಿಯಿಂದ ಕೊಡಬೇಕಾದ ನ್ಯಾಯವಾದ ಪರಿಹಾರವನ್ನು ನಾವು ಕೊಡಲು ಮುಂದಾಗುತ್ತೇವೆ.

ಉಪಾಧ್ಯಕ್ಷರು: ಈಗ ಸಭೆಯನ್ನು ಮುಂದೂಡಿ ಪುನಃ ಒಂದು ಗಂಟೆಯ ಬಳಿಕ ಸೇರುವುದು.

(ಸದನವನ್ನು ಮಧ್ಯಾಹ್ನ 1.50 ಕ್ಕೆ ಮುಂದೂಡಲ್ಪಟ್ಟು ಪುನಃ 2.50 ಗಂಟೆಗೆ ಸೇರಲು ತೀರ್ಮಾನಿಸಿತು)

(ಸದನವು ಮಧ್ಯಾಹ್ನ ಗಂಟೆ 3.20 ಕ್ಕೆ ಸಮಾವೇಶಗೊಂಡಿತು, ಮಾನ್ಯ ಅಧ್ಯಕ್ಷರು ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಮಾನ್ಯ ಅರ್ಥ ಸಚಿವರು ಇಲ್ಲದೆ ಭಾಷಣವನ್ನು ಮಾಡಬಹುದು ಎಂದರೆ ನಾನು ಭಾಷಣವನ್ನು ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ:- ಅವರು ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಅದೇ ರಾಗ; ಅವರು ಬರುತ್ತಾರೆ ಬರುತ್ತಾರೆ ಎಂದರೆ ಎಲ್ಲಿಂದ ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಬೆಲ್ ಹಾಕಿ ಅರ್ಧ ಗಂಟೆ ಯಾಯಿತು.

ಮಾನ್ಯ ಸದಸ್ಯರು:- ಎಲ್ಲರೂ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಎಲ್ಲರೂ ಇದ್ದಾರೆಂಬುದು ನಮಗೂ ಗೊತ್ತಿದೆ. ನಮಗೆ ಯಾರು ಇರಬೇಕೋ ಅವರು ಇಲ್ಲ. ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಏನೆಂಬುದು ತಿಳಿಯಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ ಏನಾಗಿದೆ ಎಂದರೆ ಅವರಿಗೆ ನಮ್ಮ ಹೆದರಿಕೆ ಇಲ್ಲ, ನಿಮ್ಮ ಹೆದರಿಗೆಯಾದರೂ ಇರಬೇಕಲ್ಲಾ;

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಆಯವ್ಯಯ ಮಂಡನೆಯಾಗುವಾಗ ಇದ್ದರು. ಇವತ್ತು ಆಯವ್ಯಯದ ಬಗ್ಗೆ ಚರ್ಚೆ ಪ್ರಾರಂಭವಾಗುವಾಗ ಇಡೀ ಸರ್ಕಾರ ಇಲ್ಲಿ ಇದೆಯೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದವರು ಏನು ಹೇಳಿದರು ಎಂಬುದನ್ನು ಅವರು ತಿಳಿದುಕೊಳ್ಳಬೇಕು, ನಾವು ಅವರನ್ನು ಪದೇ ಪದೇ ಕರೆಸುವುದು.....

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ಈ ಪರಿಸ್ಥಿತಿಯನ್ನು ನೋಡಿದಾಗ ನನಗನಿಸುವುದು ಯಾರೋ ಒಬ್ಬ ಹಸ್ತ ಸಾಮುದ್ರಿಕ ಭವಿಷ್ಯವನ್ನು ಕೇಳಿದನಂತೆ, ಅವನು ನಿನಗೆ 7 ವರ್ಷಗಳು ಶನಿ ಕಾಟವಿದೆ ಎಂದು ಹೇಳಿದನಂತೆ, ಅಷ್ಟೊತ್ತಿಗೆ ಅವನು ಅಜೆಸ್ಪ ಆಗಿದ್ದನಂತೆ, ಹಾಗೆ ನಾವು ಅಜೆಸ್ಪ್ ಆಗುತ್ತಾ ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಇದನ್ನು ಹಾಸ್ಯವಾಗಿ ತೆಗೆದುಕೊಳ್ಳುವಂಥಾದ್ದು ಅಲ್ಲ. ನಾನು ಪ್ರಾಮಾಣಿಕರಾಗಿ ಹೇಳುತ್ತಿದ್ದೇನೆ. ಅನೇಕ ಸಾರಿ ನೋಡಿದ್ದೇನೆ, ಇಷ್ಟೊಂದು ಹೀನಾಯವಾಗಿ ಸರ್ಕಾರ ಆಗಬಾರದು. ಮಾನ್ಯ ಬೈರೇಗೌಡರೇ, ತಾವು ಈ ಕಡೆ ಕುಳಿತುಕೊಂಡಿದ್ದರೆ ಏನು ಮಾಡುತ್ತಿದ್ದೀರಿ. ತಾವು ಮಂತ್ರಿಗಳಾಗಿ ಮಾತನಾಡಬೇಡಿ, ಪ್ರಾಮಾಣಿಕವಾಗಿ ಮಾತನಾಡಿ, ತಾವು ವಿರೋಧಪಕ್ಷದಲ್ಲಿ ಕುಳಿತು ಆಡಳಿತ ಪಕ್ಷದವರಿಗೆ ಯಾವ ರೀತಿಯಾಗಿ ಹೇಳುತ್ತಾ ಇದ್ದಿರಿ. ನೀವು ನೂರು ಸಾರಿ ಎದ್ದು ಎದ್ದು ಸರ್ಕಾರವಿಲ್ಲವೆಂದು ಹೇಳುತ್ತಾ ಇದ್ದಿರಿ. ಈ ರೀತಿಯಾದರೆ ಒಳ್ಳೆಯದಲ್ಲ, ಇದು ಒಳ್ಳೆಯದಲ್ಲವೆಂದು ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಇದು ಸದನಕ್ಕೆ ಅಗೌರವವಾಗುತ್ತದೆ. ಇದು ಪ್ರಜಾತಂತ್ರ ವ್ಯವಸ್ಥೆಗೆ ಅಪಾಯಕರವಾದಂತಹ ಬೆಳವಣಿಗೆ, ಈ ಶಾಸನ ಸಭೆ ಅತ್ಯಂತ ಉನ್ನತವಾದಂತಹ ಸಭೆ, ನಿಮ್ಮ ಸದಸ್ಯರುಗಳು ಎಲ್ಲಿ ಹೋಗಿದ್ದಾರೆ. ನನಗೆ ಅರ್ಥವಾಗುತ್ತಾ ಇಲ್ಲ; ಆಡಳಿತ ಪಕ್ಷದವರು ಬರೀ 15ಜನರು ಇದ್ದಾರೆ. ಆದರಲ್ಲಿ 4 ಜನರು ಮಂತ್ರಿಗಳು, 11ಜನರು ಸದಸ್ಯರುಗಳಿದ್ದಾರೆ. ಇದನ್ನು ಸಮರ್ಥನೆ ಮಾಡುವುದಕ್ಕೆ ಹಕ್ಕು ಇಲ್ಲ. ನೀವು ಕ್ಷಮಾಪಣೆಯನ್ನು ಕೇಳಿ, ಬೇಕಾದರೆ ಅಧ್ಯಕ್ಷರಿಗೆ ನೀವು ಹೇಳಿ ಸಭೆಯನ್ನು ಮುಂದೂಡೋಣ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಸದನವನ್ನು ಮುಂದೂಡುವುದು ಬೇಡ ಅವರು ಭಾಷಣವನ್ನು ಪ್ರಾರಂಭ ಮಾಡಲಿ, ಮಾನ್ಯ ಅರ್ಥ ಸಚಿವರು ಸದನಕ್ಕೆ ಬರುತ್ತಿದ್ದಾರೆ. ಸಚಿವರು ಬಂದೇ ಬಿಟ್ಟರು.

(ಈ ಹಂತದಲ್ಲಿ ಮಾನ್ಯ ಅರ್ಥ ಸಚಿವರು ಸದನಕ್ಕೆ ಆಗಮಿಸಿದರು)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನಮ್ಮ ಸದಸ್ಯರುಗಳಿಗೆ ಈ ಸದನದಲ್ಲಿ ಕುಳಿತುಕೊಳ್ಳುವುದು, ನಾವೆಲ್ಲರೂ ಭಾಷಣವನ್ನು ಕೇಳುವಂತಹ ಉತ್ಸಾಹ ಇರಬೇಕೆಂದು ಹೇಳುತ್ತೇನೆ. ನಾನು ಒತ್ತಾಯ ಮಾಡುತ್ತಿದೆನೆಂದು ತಿಳಿದುಕೊಳ್ಳಬಾರದು. ನಾನು ಪದೇ ಪದೇ ಈ ರೀತಿ ಮಾಡುತ್ತೇನೆಂದು ತಿಳಿದುಕೊಳ್ಳಬಾರದು. ತಾವು ಈ ಕೊನೆಯಿಂದ ಆ ಕೊನೆಯವರೆಗೂ ನೋಡಿ, ಇವತ್ತು ಟಿ.ವಿ.ಯವರನ್ನು ಕರೆಸಿ ಈ ಖಾಲಿ ಇರುವ ಕುರ್ಚಿಗಳನ್ನು ಜನರಿಗೆ ತೋರಿಸಿ. ಇದು ಈ ದೇಶಕ್ಕೆ ಗೊತ್ತಾಗಲಿ, ಸಮಾಜಕ್ಕೆ ಗೊತ್ತಾಗಲಿ;

ಸ್ವಾಮಿ, ಇವತ್ತು ನಮ್ಮ ಹಣೆಬರಹ ಏನೆಂಬುದು ಗೊತ್ತಾಗಲಿ.ಬಹಳ ನೋವಾಗುತ್ತದೆ, ಈ ಪರಿಸ್ಥಿತಿ ಬರಬಾರದು: ಇದು ಒಳ್ಳೆಯದಲ್ಲವೇ ಅಲ್ಲ. ನಾವು ಈ ಸದನವನ್ನು ಎಷ್ಟು ಶಕ್ತಿಯುತವಾಗಿ ಕಾಪಾಡುತ್ತೇವೆ ಅಷ್ಟು ಪ್ರಜಾತಂತ್ರ ವ್ಯವಸ್ಥೆಗೆ ಬೆಲೆ ಸಿಗುತ್ತದೆ. ಇದಕ್ಕೆ ನಾವು ಈ ರೀತಿ ನಡೆದುಕೊಂಡರೆ ಇನ್ನು ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆ ಮಾತನಾಡುವುದು ಬರೀ ಬರುಡೆ, ಅರ್ಥವಿಲ್ಲದ್ದು, ಒಳ್ಳೆಯ ನೀತಿಯಲ್ಲ.

ಅಧ್ಯಕ್ಷರು: ಈಗ ಮಲ್ಲಿಕಾರ್ಜುನ ಖರ್ಗೆಯವರೇ ಭಾಷಣವನ್ನು ಪ್ರಾರಂಭ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದು ಅತ್ತೂಕರೆದು, ಮಂತ್ರಿಗಳನ್ನು ಕರೆಯಿಸಿಕೊಂಡು ನಾವು ಭಾಷಣ ಮಾಡುವಂತಾಗಿದೆ.

ಶ್ರೀ ವಾಟಾಳ್ ನಾಗರಾಜ್ : ವಿರೋಧಪಕ್ಷದ ನಾಯಕರು, ದಯಮಾಡಿ ಈ ಕಡೆ ಕಣ್ಣುಹಾಯಿಸಿ ನೋಡಿ, ನಾನು ಬಹಳ ನೋವಿನಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದನ್ನು ಅಧ್ಯಕ್ಷರು ಗಮನಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಪ್ರತಿದಿವಸ ನಾವು ಹೇಳಿದ್ದೇ ಹೇಳುವುದು, ಅವರು ಮಾಡಿದ್ದೇ ಮಾಡುವುದು, ದೂರದರ್ಶನ ನೇರಪ್ರಸಾರ ಇಟ್ಟರೆ ಬಹುಶಃ ಏನಾದರೂ ಬರಬಹುದೇನೊ ನೋಡಿ.

ಅಧ್ಯಕ್ಷರು: ಶ್ರೀರಾಮರೆಡ್ಡಿಯವರೇ, ವಾಟಾಳ್ ನಾಗರಾಜ್‌ರವರು ಒಂದು ಮಾತನ್ನು ಹೇಳಿದರು, ಅದೇನೆಂದರೆ, ಸದಸ್ಯರೂ ಕೂಡ ಸದನದಲ್ಲಿ ಬಂದು ಕುಳಿತುಕೊಳ್ಳುವುದನ್ನು ಕಲಿತುಕೊಳ್ಳಬೇಕೆಂದು ಹೇಳಿದರು. ಈ ಸದಸಕ್ಕೆ ಬರುವುದೇ ಮಹಾದೊಡ್ಡ ಗೌರವ. ಇಲ್ಲಿ ಕುಳಿತು ಕೆಲಸ ಮಾಡತಕ್ಕಂಥ ಅಭಿಲಾಷೆ ಅವರಿಗಿರಬೇಕು. ಮಂತ್ರಿಗಳು ಇರುವುದಿಲ್ಲ, ವಿಧಾನಪರಿಷತ್ತಿಗೆ ಹೋಗುತ್ತಾರೆನ್ನುವುದು ಬೇರೆ ಪ್ರಶ್ನೆ, ಆ ಕಡೆ ಈ ಕಡೆ ಇರುವ ಸದಸ್ಯರೆಲ್ಲಾ ಬರಬಹುದಲ್ಲವೇ? ಸದಾ ಕಾಲ ವಿರೋಧಪಕ್ಷದ ಕಡೆಯ ಸದಸ್ಯರು ಹೆಚ್ಚುಕಡಿಮೆ ಇರುತ್ತಾರೆ. ಈ ಕಡೆಯ ಸದಸ್ಯರೇ ಬರುವುದಿಲ್ಲವೆಂದರೆ ಏನು ಮಾಡುವುದು ಹೇಳಿ?

ಶ್ರೀಮತಿ. ಬಿ.ಟಿ. ಲಲಿತಾ ನಾಯಕ್: ಅಧ್ಯಕ್ಷರೆ, ಸದಸ್ಯರಿಗೆ ದಿವಸಕ್ಕೆ ಎರಡು ಸಾರಿ ಹಾಜರಾತಿಯನ್ನು ತೆಗೆದುಕೊಳ್ಳಿ.

ಶ್ರೀ. ಹೆಚ್.ಕೆ. ಕುಮಾರಸ್ವಾಮಿ: ಅಧ್ಯಕ್ಷರೇ, ಹಾಜರಾತಿಯನ್ನು ತಾವೇ ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ.ಎಂ. ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೆ, ನನ್ನ ಒಂದು ಸಲಹೆ ಅದು ಸರಿಯೋ ತಪ್ಪೋ ಗೊತ್ತಾಗುವುದಿಲ್ಲ, ತಾವು ಹಾಜರಾತಿಯನ್ನು ಬೆಳಗ್ಗೆ ಸಂಜೆ ಎರಡು ಸಾರಿ ಮಾಡಿ.

ಶ್ರೀ.ಜಿ.ವಿ. ಶ್ರೀರಾಮರೆಡ್ಡಿ: ಸಹಿ ಮಾಡುವುದರಿಂದ ಇದು ಪರಿಹಾರವಾಗುವುದಿಲ್ಲ. ಅಧ್ಯಕ್ಷರು ಬೇಕಾದರೆ ಹಾಜರಾತಿ ಪುಸ್ತಕವನ್ನು ತರಿಸಿನೋಡಿದರೆ ಸಾಕಷ್ಟು ಸಹಿಗಳು ಇರುವುದು ಗೊತ್ತಾಗುತ್ತದೆ.

ಶ್ರೀ. ವಾಟಾಳ್ ನಾಗರಾಜ್: ಸಹಿ, ನೀತಿ, ಕಾನೂನಿನ ಬಲ ಬೇಡಿ, ತಾವು ಹೇಳಿದಂತೆ ನಾನು ನಿಮ್ಮನ್ನು ಸಮರ್ಥನೆ ಮಾಡುತ್ತೇನೆ. ಯಾವುದೋ ಪೂರ್ವಜನ್ಮದ ಪುಣ್ಯದಿಂದ ನಾವು ಇಲ್ಲಿಗೆ ಬಂದಿದ್ದೇವೆ ಈ ಸದನಕ್ಕೆ ನಾವು ಸದಸ್ಯರಾಗುವುದೇ ನಿಜವಾಗಲೂ ನಮಗೆ ಬಹಳ ಪಾವಿತ್ರತೆ, ಗೌರವ ತರತಕ್ಕಂಥದ್ದು, ಅದನ್ನು ನಾವು ಕಳೆದುಕೊಳ್ಳುತ್ತಿದ್ದೇವೆಂದು ನನಗೆ ಬಹಳ ನೋವಾಗುತ್ತಿದೆ. ಸದನ ಸಂಜೆ ಎಷ್ಟು ಹೊತ್ತಿನವರೆಗೆ ನಡೆಯುತ್ತದೆ ಆಲ್ಲಿಯವರೆವಿಗೂ ಸದನದ ತುಂಬಾ ಜನ ಕುಳಿತು, ಎಂತೆಂಥ ದೊಡ್ಡ ದೊಡ್ಡ ಮಹನೀಯರು ಈ ಸದನದಲ್ಲಿ ಕುಳಿತು ಚರ್ಚೆ ಮಾಡಿದ್ದಾರೆ ಅವನೆಲ್ಲಾ ನಾವು ಕೇಳಿದ್ದೇವೆ ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ, ಯುದ್ಧವೆಲ್ಲಾ ಮುಗಿದು ಸೋತು ಸುಣ್ಣವಾಗಿ ಎಲ್ಲೋ ಹೋಗಿದ್ದೇವೆ ಎನ್ನುವ ರೀತಿ ಗಾಢಾಂಧಕಾರದ ಪರಿಸ್ಥಿತಿ ನಿರ್ಮಾಣವಾಗಿದೆ; ಆ ಮೋಡ ಕವಿದ ವಾತಾವರಣ ನಿರ್ಮಾಣವಾಗಿದೆ, ಅದಾ ಗಬಾರದಿತ್ತು.

ಶ್ರೀ. ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ನಿನ್ನೆ ನನ್ನ ಭಾಷಣವನ್ನು ಕೇಳಲಿಲ್ಲ. ನೀವು ಆಲ್ಲಿ ಕುಳಿತುಕೊಂಡು ಪ್ರತಿ ಭಾಷಣ ಮಾಡುವುದಕ್ಕೆ ಪ್ರಾರಂಭ ಮಾಡಿಬಿಟ್ಟಿರಿ.

ಶ್ರೀ. ವಾಟಾಳ್‌ನಾಗರಾಜ್: ನಿನ್ನೆ ತಾವು ಭಾಷಣ ಮಾಡುವಾಗ ಇದ್ದಷ್ಟು ಜನ ಈಗ ಇಲ್ಲಿ ಇದ್ದಾರೆಯೇ? ನಾನು ಪ್ರತಿ ಭಾಷಣ ಮಾಡಲಿಲ್ಲ, ನಾನು ಇಲ್ಲಿ ಕುಳಿತುಕೊಂಡು, ನಿಮ್ಮ ಭಾಷಣ ಪ್ರತಿಯೊಂದು ಪದವನ್ನು ನಾನು ನೋಡುತ್ತದ್ದೆ. ನನಗೆ ನಿಮ್ಮ ಬಗ್ಗೆ ವಿರೋಧವಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿಬಿಟ್ಟೆ ಹೋಗಿದ್ದೇನೆ. ಆ ಕ್ಯಾಮರಗಳು, ಗದ್ದಲದಲ್ಲಿ ಕೇಳಲಿಲ್ಲ.

ಶ್ರೀ. ಸಿದ್ದರಾಮಯ್ಯ: ಇನ್ನು ಮುಂದೆ ಕ್ಯಾಮರವನ್ನು ನಿಮ್ಮ ಮುಂದೆಯೇ ಇರಿಸಬೇಕೆಂದು ತೀರ್ಮಾನ ಮಾಡಿದ್ದೇವೆ.

5 ವಿತ್ತೀಯ ಕಾರ್ಯಕಲಾಪಗಳು, 1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ.